**ಸಾಕ್ಷಿಯನ್ನು ದಿನಾಂಕ 06-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ವಿ ವಕೀಲರಿಂದಃ**

1. ವಾದಿ ನನಗೆ ಹಲವು ವರ್ಷಗಳಿಂದ ಪರಿಚಯವಿದ್ದಾರೆ. ಈ ಮೊದಲು ವಾದಿ ವಿ.ಐ.ಎಸ್.ಎಲ್ ನೌಕರರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವ ಮೊದಲು ವಾದಿ ನನಗೆ ನೋಟಿಸು ಕೊಟ್ಟಿದ್ದರು ಮತ್ತು ಅದು ನನಗೆ ಜಾರಿಯಾಗಿತ್ತು ಎಂದರೆ ಸರಿ. ನಿ.ಪಿ.–4 ರ ಅಂಚೆ ಸ್ವೀಕೃತಿಯಲ್ಲಿ ನನ್ನ ಸಹಿ ಇದೆ ಎಂದರೆ ಸರಿಯಲ್ಲ. ವಾದಿ ಕೊಟ್ಟ ನೋಟಿಸಿಗೆ ನಾನು ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಅವರ ವಕೀಲರು ಸಲ್ಲಿಸಿರುವ ವಕಲಾತು ನಾಮೆ ಹಾಗೂ ಪ್ರತಿವಾದ ಪತ್ರದಲ್ಲಿರುವ ಅವರ ಸಹಿಯನ್ನು ತೋರಿಸಲಾಯಿತು. ಈಗ ನನಗೆ ತೋರಿಸಲಾದ ಸಹಿ ಯಾರದ್ದು ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ನಾನು ಹೆಬ್ಬೆಟ್ಟಿನ ಗುರುತು ಮಾತ್ರ ಹಾಕುತ್ತೇನೆ, ಸಹಿ ಮಾಡಲು ಬರುವುದಿಲ್ಲ ಎನ್ನುತ್ತಾರೆ. ಈಗ ನನಗೆ ತೋರಿಸಲಾದ ನಿ.ಪಿ.–1 ಮತ್ತು 2 ರ ದಾಖಲೆಗಳಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಹೆಬ್ಬೆಟ್ಟಿನ ಗುರುತುಗಳನ್ನು ಈಗ **ನಿಪಿ–1(ಡಿ) ಮತ್ತು 2(ಬಿ)** ಎಂದು ಗುರುತಿಸಲಾಯಿತು. ವಾದಿಯಿಂದ ರೂ.4 ಲಕ್ಷ ಸಾಲ ಪಡೆದು ನಿ.ಪಿ.–1 ಮತ್ತು 2 ರ ದಾಖಲೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–1 ಮತ್ತು 2 ರ ದಾಖಲೆಗಳಿಗೆ

ಯಾವ ಕಾರಣಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಪರಿಚಯಸ್ಥರಿಗೆ ಹಣ ಕೊಡಬೇಕಿದೆ ಎಂದು ಹೇಳಿ ವಾದಿ ಸಹಿ ಪಡೆದುಕೊಂಡರು ಎನ್ನುತ್ತಾರೆ. ನಿಮ್ಮ ಪರಿಚಯಸ್ಥರು ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ 22.03.2021 ರಂದು ವಾದಿಯಿಂದ ರೂ.4 ಲಕ್ಷ ಸಾಲ ಪಡೆದು ನಿ.ಪಿ.–1 ಮತ್ತು 2 ರ ದಾಖಲೆಗಳನ್ನು ಬರೆದುಕೊಟ್ಟಿದ್ದರೂ ಸಹ ನನ್ನ ಪರಿಚಯಸ್ಥರಿಗೆ ಹಣ ಕೊಟ್ಟು ವಾದಿ ಸದರಿ ದಾಖಲೆಗೆ ನನ್ನ ಸಹಿ ಪಡೆದುಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಬರೆಯುವಾಗ ಕೆಂಪಯ್ಯ ಎಂಬ ಸಾಕ್ಷಿದಾರರು ಇದ್ದರು ಮತ್ತು ಅದನ್ನು ರಾಘವೇಂದ್ರಚಾರ್ ಇದ್ದರು ಎಂದರೆ ಸರಿ. ಸದರಿ ಸಾಕ್ಷಿದಾರರ ಸಮ್ಮುಖ ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದೆ ಎಂದರೆ ಸಾಕ್ಷಿ ವಾದಿಯೇ ಸಾಕ್ಷಿದಾರರನ್ನು ಕರೆದುಕೊಂಡು ಬಂದಿದ್ದರು ಎನ್ನುತ್ತಾರೆ. ನಾನು ಸಾಕ್ಷಿ ಕರೆದುಕೊಂಡು ಬಂದಿದೆ ವಾದಿ ಅಲ್ಲ ಎಂದರೆ ಸರಿಯಲ್ಲ.

3. ವಾದಿಗೆ ಸಾಲ ಮರುಪಾವತಿ ಮಾಡಲು ನಾನು ಬಾಧ್ಯಸ್ಥನಿರುವುದರಿಂದಲೇ ಆತ ಕೊಟ್ಟ ನೋಟಿಸಿಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯಿಂದ ಪಡೆದ ರೂ.4 ಲಕ್ಷ ಸಾಲವನ್ನು ಶೇ.18 ರಷ್ಟು ಬಡ್ಡಿ ಸಮೇತ ಮರುಪಾವತಿಸುವುದಾಗಿ ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ವಾಗ್ದಾನದಂತೆ ನಾನು ಸಾಲ ಮರುಪಾವತಿ ಮಾಡದ ಕಾರಣ ವಾದಿ ನೋಟಿಸು ಕೊಟ್ಟರು ಎಂದರೆ ಸರಿಯಲ್ಲ. ಅಸಲು ಮೊತ್ತ ರೂ.4 ಲಕ್ಷ ಗಳಿಗೆ ವಾದಿ

ಸಲ್ಲಿಸಿರುವ ಈ ದಾವೆಯಲ್ಲಿ ಸದರಿ ಅಸಲು ಹಣವನ್ನು ಅವರಿಗೆ ಹಿಂದಿರುಗಿಸಲು ನಾನು ಬಾಧ್ಯಸ್ಥ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**